# ನಾರಾಯಣ ಗೋವಿಂದ ಹರಿ ನಾರಾಯಣ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 11.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 322.
3. **Note:** Lyrics given without highlights are as per Ref. 2. The wordings in Ref. 1 is mostly same as in Ref. 2 with few differences. Minor differences are not considered here, the one which is a bit different, but the meaning is same is given in yellow highlights.
4. **Note:** Singer has followed wordings as in Ref. 2.

ರಾಗ: ಧನ್ಯಾಸಿ ತಾಳ: ಆದಿ

ನಾರಾಯಣ ಗೋವಿಂದ
ಹರಿ ನಾರಾಯಣ ಗೋವಿಂದ || ಪ ||

ನಾರಾಯಣ ಗೋವಿಂದ ಮುಕುಂದ
ಪರತರ ಪರಮಾನಂದ || ಅಪ ||

ಮೊದಲು ಮತ್ಸ್ಯನಾಗಿ ಉದಿಸಿ ಸೋಮನ
ಸದೆದು ವೇದಗಳ ತಂದ || 1 ||

ಮಂಧರಗಿರಿ ಸಿಂಧುವಿನೊಳಮೃತ (ಮಂಧರಗಿರಿಯಲಿ ಸಿಂಧು ಮಥಿಸಿ ಸುಧೆ)
ತಂದು ಭಕ್ತರಿಗುಣಲೆಂದ || 2 ||

ಭೂಮಿಯ ಕದ್ದ ಖಳನ ಮರ್ದಿಸಿ
ಆ ಮಹಾ ಸತಿಯಳ ತಂದ || 3 ||

ದುರುಳ ಹಿರಣ್ಯನ ಕರುಳ ಬಗೆದು
ತನ್ನ ಕೊರಳೊಳಗಿಟ್ಟ ಬಗೆಯಿಂದ || 4 ||

ಪುಟ್ಟನಾಗಿ ಮಹಿ ಕೊಟ್ಟ ಬಲಿಯ ತಲೆ
ಮೆಟ್ಟಿ ತುಳಿದ ಬಗೆಯಿಂದ || 5 ||

ಧಾತ್ರಿಯೊಳು ಮುನಿ ಪುತ್ರನಾಗಿ ಬಂದು
ಕ್ಷತ್ರಿಯರೆಲ್ಲರ ಕೊಂದ || 6 ||

ಮಡದಿಗಾಗಿ ಸರಗಡಲನೆ ಕಟ್ಟಿ
ಹಿಡಿದು ರಾವಣನ ಕೊಂದ || 7 ||

ಗೋಕುಲದಿ ಹುಟ್ಟಿ ಗೋವ್ಗಳ ಕಾಯ್ದ
ಗೋಪಾಲಕೃಷ್ಣ ತಾ ಬಂದ || 8 ||

ಛಲದಲಿ ತ್ರಿಪುರರ ಸತಿಯರ ವ್ರತದ
ಫಲವನಳಿದ ಬಗೆಯಿಂದ || 9 ||

ಧರೆಯೊಳು ಪರಮ ನೀಚರ ಸವರಿ
ಕುದುರೆಯೇರಿದ ಕಲಿ ಚಂದ || 10 ||

ದೋಷ ದೂರ ಶ್ರೀ ಪುರಂದರ ವಿಠಲ
ಪೋಷಿಪ ಭಕ್ತ ಸುವೃಂದ || 11 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ದಶಾವತಾರದ ವರ್ಣನೆಯನ್ನು ಒಳಗೊಂಡ ಒಂದು ಕೀರ್ತನೆ.**

**ಸಿಂಧು** = ಮಹಾಸಾಗರ, ಸಮುದ್ರ

**ಮಹಾಸತಿ** = ಭೂದೇವಿ

**ಪುಟ್ಟ** = ವಟು

**ಧಾತ್ರಿ** = **ಮಹಿ** = ಭೂಮಿ

**Classification:** Keerthane
**Ankita:** sri purandara vittala
**Location:** NA
**Category:** sankeerna, dashavatara
**Sub-Category:** dashavatara, krishna, Narayana, govinda, ananda, veda, amruta, bhumi, kalla, patni, muni, govu, vrata, phala, kudure, rayana, hiranya,
**Pravachana:** NA
**Explanation:** NA